**ಓ.ಎಸ್. ನಂ: 19/2015**
**ಪಿ.ಡಬ್ಲ್ಯೂ:1,ಶರಬಣ್ಣಾ**

<u>ದಿನಾಂಕ : 16-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟಿ ಸವಾಲು :- ಶ್ರೀ ಜಿ ಎನ್ ಜಿ ವಕೀಲರಿಂದ :</u>

ಸನ್ನತಿ ನನ್ನ ಸ್ವಂತ ಊರು. ಸನ್ನತಿ ಗ್ರಾಮದ ಹದ್ದಿನಲ್ಲಿ ನನ್ನ ಪೂರ್ವಜರು ಮಾಡಿದ ಹೊಲ ಮನೆಗಳು ಇದೆ ಎನ್ನವುದು ಸರಿ. ನನ್ನ ತಂದೆ ಕಾಲದಿಂದಲೂ ನಮ್ಮ ಮನೆತನವು ಒಕ್ಕಲುತನ ಆಧಾರಿತ ಮನೆತನ ಅಂದರೆ ಸರಿ. ದೊಡ್ಡಪ್ಪ ಅಮೋಜಿ ನನ್ನ ತಂದೆ ಎನ್ನುವುದು ಸರಿ. ನನ್ನ ತಂದೆ 1993 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ನಾನು, ಡಾ: ಭೀಮಾಶಂಕರ ಮತ್ತು ಶಾಂತಮಲ್ಲಪ್ಪ 3 ಜನ ಗಂಡು ಮಕ್ಕಳು ಅಂದರೆ ಸರಿ. ಅದೇ ರೀತಿ ನಮಗೆ 7 ಜನ ಅಕ್ಕ ತಂಗಿಯರು ಇರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ 1966 ರಲ್ಲಿ ಅವರ ಮಕ್ಕಳ ನಡುವೆ ಪಾಲು ವಿಭಾಗ ಮಾಡಿರುತ್ತಾರೆ. ಸದರಿ ಪಾಲು ವಿಭಾಗವು ನಮ್ಮ ತಂದೆಯ ಎಲ್ಲಾ ಮಕ್ಕಳ ನಡುವೆ ಆಗಿಲ್ಲಾ. ಆ ಸಮಯದಲ್ಲಿ ಸನ್ನತಿಯಲ್ಲಿ ಇದ್ದ ಎಲ್ಲಾ ಹೊಲ ಮನೆಗಳು ವಿಭಾಗ ಆಗಿದೇಯಾ ಎಂದರೆ ಸಾಕ್ಷಿ ಇಲ್ಲಾ ಕೇವಲ ಹೊಲಗಳಲ್ಲಿ ವಿಭಾಗ ಆಗಿದೆ ಎಂದು ಹೇಳುತ್ತಾರೆ. ಸದರಿ ಪಾಲು ವಿಭಾಗವು ಕೋರ್ಟನಲ್ಲಿ ಡಿಕ್ರಿ ಮೂಲಕ ಅಥವಾ ನೊಂದಾಯಿತ ಪಾಲು ಪತ್ರದ ಪ್ರಕಾರ ಆಗಿಲ್ಲಾ ಅದು ಕುಟುಂಬದ ನಡುವೆ ಆದ ವಿಭಾಗ ಎಂದು ಹೇಳುತ್ತಾರೆ. ಸದರಿ ಪಾಲು ವಿಭಾಗಕ್ಕೆ ನಾನು, ನನ್ನ ತಂದೆ, ನಮ್ಮ ದೊಡ್ಡಪ್ಪ, ಕಾಕಾ, ನನ್ನ ತಮ್ಮ ಸುಭಾಷಚಂದ್ರ ಸಹಿ ಮಾಡಿರುತ್ತಾರೆ. ಸದರಿ ಪಾಲು ವಿಭಾಗ ಆದ ಬಗ್ಗೆ ದಾಖಲೆ ನನ್ನ ಹತ್ತಿರ ಇಲ್ಲಾ ನಮ್ಮ ತಂದೆ ಹತ್ತಿರ ಇತ್ತು ನನ್ನ ಬಳಿ ಜರಾಕ್ಸ ಪ್ರತಿ ಇತ್ತು ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವಾಗ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ಸದರಿ 1966 ರಲ್ಲಿ ಪಾಲು ಆದ ಬಗ್ಗೆ ಮತ್ತು ಆ ಬಗ್ಗೆ ದಾಖಲೆ ಇರುವ ಬಗ್ಗೆ ವಿಷಯವನ್ನು ತಿಳಿಸಿ ವಕೀಲರಿಗೆ ದಾಖಲೆಯನ್ನು ಕೊಟ್ಟಿರುವುದಿಲ್ಲಾ. ನನ್ನ ಪ್ರತಿವಾದ ಪತ್ರದಲ್ಲಿ 1966 ರಲ್ಲಿ ಪಾಲು ವಿಭಾಗ ಆದ ಬಗ್ಗೆ ಬರೆಸಿಲ್ಲಾ. 1966 ರಲ್ಲಿ ಪಾಲು ವಿಭಾಗವು ನನ್ನ ಮತ್ತು ನನ್ನ ಸಹೋದರರ ಹಾಗೂ ತಂದೆ ನಡುವೆ ಆಗಿ ಹೊಲದಲ್ಲಿ ಪಾಲು ಆಗಿದೆ ಏಂದು ಆ ಬಗ್ಗೆ ಕಾಗದ ಪತ್ರ ಆಗಿತ್ತು ಎಂದು ಶುದ್ದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

1993 ರ ನಂತರ ಮತ್ತೇ ನಾವು ಕುಟುಂಬದವರು ಪಾಲು ವಿಭಾಗ ಮಾಡಿಕೊಂಡಿಲ್ಲಾ ಸಾಕ್ಷಿ ಕುಟುಂಬ ವ್ಯವಸ್ಥೆ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. 1966 ರಲ್ಲಿ ಪಾಲು ವಿಭಾಗ ಆದದನ್ನು ರದ್ದು ಮಾಡಿ 1993 ರ ನಂತರ ಕುಟುಂಬ ವ್ಯವಸ್ಥೆ ಮಾಡಿಕೊಂಡ ಬಗ್ಗೆ ನಾನು ನನ್ನ ವಕೀಲರಿಗೆ ಮಾಹಿತಿ ಕೊಟ್ಟಿಲ್ಲಾ. ಸದರಿ ಕುಟುಂಬ ವ್ಯವಸ್ಥೆ ಮಾಡಿಕೊಂಡ ಬಗ್ಗೆ ದಾಖಲೆಯನ್ನು ನನ್ನ ವಕೀಲರಿಗೆ ಕೊಟ್ಟಿಲ್ಲಾ ಮತ್ತು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲಾ.

ನಾನು ವಕೀಲರಿಗೆ 1978 ರಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದೇವೆ ಎಂದು ವಕೀಲರಿಗೆ ಮಾಹಿತಿ ಕೊಟ್ಟಿಲ್ಲಾ. ಇವತ್ತಿನವರೆಗೂ ನನ್ನ ಹಾಗೂ ನನ್ನ ಸಹೋದರರು, ಸಹೋದರಿಯರು ನಡುವೆ ಕಾನೂನು ಪ್ರಕಾರ ಪಾಲು ವಿಭಾಗ ಆದ ಬಗ್ಗೆ ಮತ್ತು ಯಾರ ಯಾರಿಗೆ ಯಾವ ಯಾವ ಸ್ವತ್ತು ಪಾಲಿನಲ್ಲಿ ಹೋಗಿದೆ ಎಂದು ತೋರಿಸಲು ದಾಖಲೆ ಯಾವುದು ಇಲ್ಲಾ ಎಂದು ಸೂಚಿಸುವುದು ಸರಿ.

ನನ್ನ ತಂದೆಗೆ ಅವರ ಪೂರ್ವಜರಿಂದ ಸನ್ನತಿ ಗ್ರಾಮದ ವ್ಯಾಪ್ತಿಯಲ್ಲಿ ಸುಮಾರು 99 ರಿಂದ 100 ಎಕರೆ ಜಮೀನು ಬಂದಿದೆ ಎಂದರೆ ಸಾಕ್ಷಿ ಅಷ್ಟು ಬಂದಿಲ್ಲಾ ಎಂದು ಹೇಳುತ್ತಾರೆ. ಸಾಕ್ಷಿಯು ಅವರಿಗೆ 47 ಎಕರೆ ಹಿರಿಯರಿಂದ ಬಂದಿದ್ದು ಎಂದು ಹೇಳುತ್ತಾರೆ. ದಿ: 11-5-2009 ರಲ್ಲಿ ನಮ್ಮ ಗ್ರಾಮದ ಗುರುಲಿಂಗಯ್ಯ ಇವರ ಸಮಕ್ಷಮ ನಾನು, ಡಾ: ಭೀಮಾಶಂಕರ, ಶಾಂತಮಲ್ಲಪ್ಪ ಯಾರಿಗೆ ಯಾವ ಯಾವ ಸ್ವತ್ತು ಹೋಗಬೇಕು ಎನ್ನುವ ಬಗ್ಗೆ ಟಿಪ್ಪಣಿ ಮಾಡಿದ್ದೇವೆ ಎಂದರೆ ಹೌದು ಎಂದು ಹೇಳುತ್ತಾರೆ ಅದನ್ನು ನಾವು ನೊಂದಣಿ ಮಾಡಿಸಿಲಿಲ್ಲಾ ಎಂದರೆ ಹೌದು ಎಂದು ಹೇಳುತ್ತಾರೆ. ಸದರಿ ಟಿಪ್ಪಣಿ ಪ್ರಕಾರ ಡಾ: ಭೀಮಾಶಂಕರ ಇವರಿಗೆ 32 ಎಕರೆ 16 ಗುಂಟೆ ಎಂದು ತೋರಿಸಲಾಗಿತ್ತು ಎಂದರೆ ಸಾಕ್ಷಿ ಇರಬಹದು ಎಂದು ಹೇಳುತ್ತಾರೆ. ಅದೇ ರೀತಿ ನನ್ನ ಪಾಲಿಗೆ 31 ಎಕರೆ 34 ಗುಂಟೆ ಎಂದು ತೋರಿಸಲಾಗಿತ್ತು ಎಂದರೆ ಸಾಕ್ಷಿ ಇಲ್ಲಾ 32 ಎಕರೆ 11 ಗುಂಟೆ ಎಂದು ಹೇಳುತ್ತಾರೆ. ಅದೇ ರೀತಿ ಶಾಂತಮಲ್ಲಪ್ಪ ಇವರಿಗೆ 35 ಎಕರೆ 34 ಗುಂಟೆ ಎಂದು ತೋರಿಸಲಾಗಿತ್ತು ಎಂದರೆ ಸಾಕ್ಷಿ 44 ಎಕರೆ 24 ಗುಂಟೆ ಎಂದು ಹೇಳುತ್ತಾರೆ. ಈ ವಿಚಾರವಾಗಿ ಚರಬಸವೇಶ್ವರ ಗದ್ದುಗೆ ಶಹಾಪೂರನಲ್ಲಿ ಟಿಪ್ಪಣಿ ಬರೆಯಲಾಯಿತು ಎಂದರೆ ಹೌದು ಎಂದು ಹೇಳುತ್ತಾರೆ. ಈ ಟಿಪ್ಪಿಣಿ ಕಾಗದಕ್ಕೆ ಶಹಾಪೂರ ವಕೀಲರಾದ ಎಮ್ ಆರ್ ಮಾಲಿಪಾಟೀಲ್ ಮತ್ತು ಸಿದ್ರಾಮಯ್ಯಾ ಎನ್ನವುರು ಸಾಕ್ಷಿ ಯಾಗಿ ಸಹಿ ಮಾಡಿದ್ದರು ಎಂದರೆ ಹೌದು ಎಂದು ಹೇಳುತ್ತಾರೆ. ಸದರಿ ಕಾಗದಕ್ಕೆ ನಾನು, ನನ್ನ ಸಹೋದರರು ಎಲ್ಲರೂ ಅವರ ಸಮಕ್ಷಮ ಸಹಿ ಮಾಡಿದ್ದೇವೆ ಎಂದರೆ ಹೌದು ಎಂದು ಹೇಳುತ್ತಾರೆ. ಈ ಟಿಪ್ಪಿಣಿ ಪ್ರಕಾರ ನಾವು ನಮ್ಮ ಪಾಲಿಗೆ ಎಂದು ಬರೆದ ಪ್ರಕಾರ ಆ ಸ್ವತ್ತಿಗೆ ಖಾತೆ ಬದಲಾವಣೆ ಮಾಡಿಸಿಕೊಂಡೇವು ಎಂದರೆ ಹೌದು ಎಂದು ಹೇಳುತ್ತಾರೆ. ಸದರಿ ಟಿಪ್ಪಣಿ ಕಾಗದ ನನ್ನ ಬಳಿ ಇಲ್ಲಾ ನನ್ನ ತಮ್ಮ ಅಥವಾ ಗುರುಗಳ ಬಳಿ ಇರಬಹದು ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ.

ಈ ದಾವೆಯನ್ನು ಅಕ್ಕಮ್ಮ ನಿಖಿತಾ ಹಾಕಿದ ನಂತರ ಸದರಿ ಟಿಪ್ಪಣಿ ಕಾಗದವನ್ನು ಪಡದುಕೊಳ್ಳಲು ನಾನು ಪ್ರಯತ್ನ ಪಟ್ಟಿಲ್ಲಾ. ನಾನು ಟಿಪ್ಪಣಿ ಪ್ರಕಾರ ಪಾಲು ಮಾಡಿಕೊಂಡಿದ್ದು ಖಾತೆ ಬದಲಾವಣೆ ಮಾಡಿಕೊಂಡಿದ್ದು ಈ ವಿಚಾರವನ್ನು ವಕೀಲರಿಗೆ ತಿಳಿಸಿದ್ದು ತಕರಾರಿನಲ್ಲಿ ಬರೆಸಿರುತ್ತೇನೆ. 2009 ರಲ್ಲಿ ಖಾತೆ ಬದಲಾಣೆ ಆದ ನಂತರ ನಾವು ಮತ್ತೇ ಯಾವುದೇ ಬದಲಾವಣೆ ಮಾಡಿಲ್ಲಾ. ಸನ್ನತಿ ಗ್ರಾಮದಲ್ಲಿ ನಮ್ಮ ಪೂರ್ವಜರಿಗೆ ಸೇರಿದ 3 ಮನೆಗಳು ಇದೆ ಎಂದರೆ

ಸಾಕ್ಷಿ ಇಲ್ಲಾ 2 ಮನೆಗಳೂ ಇವೆ ಎಂದು ಹೇಳುತ್ತಾರೆ. ಸದರಿ 3 ಮನೆಗಳಲ್ಲಿ ನಾವು ಅಂದರೆ ನಾನು, ಶಾಂತಮಲ್ಲಪ್ಪ ಮತ್ತು ಭೀಮಾಶಂಕರ 3 ಜನ ಪ್ರತಿ ಮನೆಯಲ್ಲಿ 3 ಜನರಿಗೆ ಪಾಲು ಎಂದು ಬದಲಾವಣೆ ಮಾಡಿಕೊಂಡಿದ್ದೇವೆ ಎಂದು ಸೂಚಿಸುವುದು ಸರಿ. ಸದರಿ ಮನಗೆಳು ಇಂದಿಗೂ ನಮ್ಮ ತಂದೆ ಹೆಸರಿನಲ್ಲೇ ಇರುತ್ತೇವೆ ನಾವು ಯಾರು ಬದಲಾವಣೆ ಮಾಡಿಲ್ಲಾ ಎಂದು ಹೇಳುತ್ತಾರೆ. 2009 ರಲ್ಲಿ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡ ನಂತರ ನನ್ನ ಗಂಡು ಮಕ್ಕಳು ಮ್ತುತ್ತು ಹೆಣ್ಣ ಮಗಳ ಹೆಸರಿಗೆ ಯಾವುದೇ ಸ್ವತ್ತು ಬದಲಾವಣೆ ಮಾಡಿಲ್ಲಾ. ಇವತ್ತಿಗೂ ನಾನು ಮತ್ತು ನನ್ನ ಮಕ್ಕಳು ಕೂಡು ಕುಟುಂಬದಲ್ಲಿ ಇದ್ದೇವೆ ಎಂದರೆ ಸಾಕ್ಷಿ ಇಲ್ಲಾ ಆಸ್ತಿ ನನ್ನ ಹೆಸರಿನಲ್ಲಿ ಇದೆ. ನಾನು ಬೇರೆ ಇರುತ್ತೇನೆ ಎಂದು ಹೇಳುತ್ತಾರೆ. ನನ್ನ ಮಗ ಕವಿರಾಜ 2013 ರಲ್ಲಿ ತೀರಿಕೊಂಡಿರುತ್ತಾರೆ. ಸದರಿ ಕವಿರಾಜ ಇವರಿಗೆ ಅವರ ಹೆಂಡತಿ ಅಕ್ಕಮ್ಮ ಮತ್ತು ಮಗಳು ನಿಖಿತಾ ನೇರ ವಾರಸುದಾರರು ಎಂದರೆ ಹೌದು ಎಂದು ಹೇಳುತ್ತಾರೆ. ನನ್ನ ಮಗ ಸತ್ತ ನಂತರ ಅವರ ಹೆಂಡತಿ ಮಗಳ ಹೆಸರಿಗೆ ಆಸ್ತಿ ಹಚ್ಚುವ ಪ್ರಯತ್ನ ಮಾಡಿಲ್ಲಾ ಅವರು ಎಂದು ಊರಲ್ಲಿ ಇದ್ದರು ಮತ್ತು ಕೇಸ ಹಾಕಿದ್ದಿರಂದ ಪ್ರಶ್ನೆ ಉದಭವಿಸುವುದಿಲ್ಲಾ ಎಂದು ಹೇಳುತ್ತಾರೆ.

ಸದರಿ ಕವಿರಾಜ ಇವರು ಸಾಯುವ 3 ವರ್ಷದ ಮೊದಲಿಗೆ ಆರೋಗ್ಯವಾಗಿ ಇರದೇ ಹಾಸಿಗೆ ಹಿಡಿದ್ದಿದರು ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ಅವರಿಗೆ ಆರೋಗ್ಯ ಸರಿ ಇಲ್ಲದಿದ್ದಾಗ ಆಸ್ಪತ್ರೆಯಲ್ಲಿ ಇದ್ದಾಗ ನನ್ನ ಸೊಸೆ ಅವರ ಜೊತೆ ಇದ್ದು ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನನಗೆ ನನ್ನ ಮಗ ಮತ್ತು ಸೊಸೆ ಮೊಮ್ಮಗಳ ಜೊತೆ ವೈಮನಸ್ಸು ಉಂಟಾಗಿ ಸೊಸೆ ಮತ್ತು ಮೊಮ್ಮಗಳನ್ನು ಮನೆಯಿಂದ ಹೊರೆಗೆ ಹಾಕಿದ್ದೇವೆ ಎಂದರೆ ಸಾಕ್ಷಿ ಇಲ್ಲಾ ಅವರೇ ಹೋಗಿರುತ್ತಾರೆ ಎಂದು ಹೇಳುತ್ತಾರೆ. ಸದರಿ ವಿಚಾರವಾಗಿ ನಾನು ಅವರನ್ನು ಸರಿಯಾಗಿ ನೋಡಿಕೊಂಡಿಲ್ಲಾ ಜೀವನಾಂಶ ಕೊಟ್ಟಿಲ್ಲಾ ಎಂದು ಅವರು ಧಾರವಾಡ ನ್ಯಾಯಾಲಯದಲ್ಲಿ ಓಎಸ್ 9/2014 ದಾವೆಯನ್ನು ನನ್ನ ವಿರುದ್ಧ ಹಾಕಿದ್ದರು ಎಂದರೆ ಸಾಕ್ಷಿ ಜೀವನಾಂಶಕ್ಕೆ ಹಾಕಿದ್ದರು ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ನಾನು ಸಾಕ್ಷಿ ವಿಚಾರಣೆ ಕೊಟ್ಟಿದ್ದೆನೆ ಎಂದರೆ ಹೌದು ಎಂದು ಹೇಳಿದ್ದು ಸದರಿ ಸಾಕ್ಷಿ ವಿಚಾರಣೆಯ ದೃಡಿಕೃತ ನಕಲನ್ನು ನಿಪಿ-19 ಎಂದು ಗುರುತಿಸಲಾಯಿತು. ಅದೇ ರೀತಿ ಆ ಪ್ರಕರಣದಲ್ಲಿ ಅಕ್ಕಮ್ಮ ಇವರ ಸಾಕ್ಷಿ ವಿಚಾರಣೆ ಆಗಿದ್ದು ನಮ್ಮ ವಕೀಲರಾದ ಪಿ.ಎಸ್. ನಾಯಕ ಇವರು ಪಾಟಿ ಸವಾಲು ಮಾಡಿದ್ದರು ಎಂದರೆ ಸಾಕ್ಷಿ ಹೌದು ಎಂದು ಒಪ್ಪಿದ್ದು ಸದರಿ ಅಕ್ಕಮ್ ಇವರ ಸಾಕ್ಷಿ ವಿಚಾರಣೆಯ ದೃಡಿಕತ ನಕಲನ್ನು ನಿಪಿ-20 ಎಂದು ಗುರುತುಸಲಾಯಿತು. ಸದರಿ ಪ್ರಕರಣದಲ್ಲಿ ವಿಚಾರಣೆ ನಡೆದು 30.07.2016 ರಂದು ತೀರ್ಪು ಆಗಿ ಜೀವನಾಂಶ ಕೊಡಬೇಕು ಎಂದು ಆದೇಶ ಆಗಿತ್ತು ಎಂದರೆ ಸಾಕ್ಷಿ ಹೌದು ಎಂದು ಒಪ್ಪಿದು ಸದರಿ ಓಎಸ್ 9/2014 ರಲ್ಲಿ ಆದ ತೀರ್ಪಿನ ದೃಡಿಕೃತ ನಕಲನ್ನು ನಿಪಿ-21 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸ.ನಂ. 153, 16 ಎಕರೆ 22 ಗುಂಟೆ ಇದು 2001-02 ಸಾಲಿನಲ್ಲಿ ಪಹಣಿ ಪತ್ರಿಕೆ ಯಲ್ಲಿ ರವಿರಾಜ ಮತ್ತು ಕವಿರಾಜ ಇವರಿಗೆ ಹಸೆರಿಗೆ ಇತ್ತು ಎಂದು ಆ ಬಗ್ಗೆ ಪಹಣಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ 1976 ರಿಂದ 2009 ರವರೆಗೆ ಇತ್ತು ಎಂದು ಹೇಳಿದ್ದು ಸದರಿ ದಾಖಲೆ ಗ್ರಾಮ ಲೆಕ್ಕಾಧಿಕಾರಿ ನೀಡಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ಸದರಿ ಆಸ್ತಿಯು 2009 ರಲ್ಲಿ ನನ್ನ ಮಕ್ಕಳ ಹಸರಿಗೆ ಇತ್ತು ಎಂದು ಹೇಳಿದ್ದು ನಂತರದಲ್ಲಿ ಶಾಂತಮಲ್ಲಪ್ಪ ಅಥವಾ ನನ್ನ ಹೆಸರಿಗೆ ಕಾನೂನು ಪ್ರಕಾರ ಅಂದರೆ ಹಕ್ಕು ಬಿಡುಗಡೆ ಪತ್ರ, ಕ್ರಯ ಪತ್ರ ಅಥವಾ ದಾನ ಪತ್ರ ದ ಮೂಲಕ ಕೊಟ್ಟಿರುತ್ತಿರಾ ಎಂದರೆ ಸಾಕ್ಷಿ ಅದು ಯಾವದು ಇಲ್ಲಾ ಖಾತೆ ಬದಲಾವಣೆ ಮಾತ್ರ ಆಗಿದೆ ಎಂದು ಹೇಳುತ್ತಾರೆ. ದಿ: 24-01-2011 ರಂದು ನಾನು ಶಾಂತಮಲ್ಲಪ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಅರ್ಜಿ ಕೊಟ್ಟು ಖಾತೆ ಬದಲಾವಣೆ ಮಾಡಿಸಿರುತ್ತೇನೆ ಎಂದರೆ ಸಾಕ್ಷಿ ರಿ-ಶಪಲಿಂಗ ಆದ ಪ್ರಕಾರ ಅವರ ರವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಅರ್ಜಿ ಕೊಟ್ಟಿದ್ದು ಎಂದು ಹೇಳಿದ್ದು, ಅದನ್ನು ಒಪ್ಪಿದ್ದು ಆ ಆರ್ಜಿಯ ದೃಡಿಕೃತ ನಕಲು, ಮುಟೇಶನ ನೋಟಸ್, ಮತ್ತು ಮುಟೇಶನ ಪ್ರತಿ ದಾಖಲೆಗಳನ್ನು ತೋರಿಸಿದ್ದು ಅವುಗಳನ್ನು ನಿಪಿ-23 ರಿಂದ 28 ಎಂದು ಗುರುತಿಸಲಾಯಿತು. ಸದರಿ ರಿ-ಶಪಲಿಂಗ 2009 ರಲ್ಲಿ ಆಗಿರುತ್ತದೆ. ಸದರಿ ರಿ-ಸ್ವಪಲಿಂಗ ನೊಂದಾಯಿತ ಕಾಗದ ಮೂಲಕ ಆಗಿಲ್ಲಾ. ಸದರಿ ಖಾತೆ ಬದಲಾವಣೆ ಅರ್ಜಿ ಸಲ್ಲಿಸಿದಾಗ ರಿ-ಶಪಲಿಂಗ ದಾಖಲೆಯನ್ನು ಸಹ ತಹಸೀಲ್ದಾರವರಿಗೆ ಕೊಟ್ಟಿರುತ್ತೇನೆ.

2010-11 ರಲ್ಲಿ ನನ್ನ ಮಗ ಮತ್ತು ಸೊಸೆ ನಡುವೆ ವೈ ಮನಸ್ಸು ಉಂಟಾಗಿ ಗುಲಬರ್ಗಾ ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಚೆದೇನಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನ್ನ ಮಗ ಸಲ್ಲಿಸಿದ್ದು, ಮೊದಲು ವಿವಾಹ ಮರು ಸ್ಥಾಪನೆಗೆ ಅರ್ಜಿ ಹಾಕಿದ್ದು ನಂತರ ವಿಚ್ಚೇದನೆಗೆ ಹಾಕಿದ್ದಾ ಎಂದು ಹೇಳುತ್ತಾರೆ. ನನ್ನ ಮಗ, ಸೊಸೆ ಮೊಮ್ಮಗಳ ನಡುವೆ ಈ ವ್ಯಾಜ್ಯ ನಡೆಯುತ್ತಿದ್ದಾಗ ದುರದ್ದೇಶದಿಂದ ಸ.ನಂ. 153 ಇದನ್ನು ಮುಟೇಶನ ಮೂಲಕ ಶಾಂತಮಲ್ವಪ ಹೆಸರಿಗೆ ಮಾಡಿದ್ದೇ ನೆ ಅಂದರೆ ಸುಳ್ಳು ಎಂದು ಹೇಳುತ್ತಾರೆ. ಸದರಿ ಜಮೀನಿನಲ್ಲಿ ಸರಕಾರವು ಜಮೀನು ಸ್ವಾಧೀನ ಪಡೆದು ಆ ಪ್ರಕಾರ ಶಾಂತಮಲ್ಲಪ್ಪ ಹೆಸರಿಗೆ ಪರಿಹಾರ ಧನವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳಿದ್ದು ಆ ಬಗ್ಗೆ 4(1) ಅಧೀಸೂಚನೆ ದಾಖಲೆಯ ದೃಡಿಕೃತ ನಕಲನ್ನು ತೊರಿಸಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಯಿತು. 2017-18 ನೇ ಸಾಲಿನಲ್ಲಿ ಸ.ನಂ: 117/1 ಜಮೀನು ನನ್ನ ಹೆಸರಿನಲ್ಲಿ ಇತ್ತು ಎಂದು ಪಹಣಿ ದಾಖಲೆ ತೋರಿಸಲಾಗಿ ಸಾಕ್ಷಿ ಆ ವರ್ಷದಲ್ಲಿ ನನ್ನ ಹೆಸರಿಗೆ ಇರಲಿಲ್ಲಾ ನಂತರದಲ್ಲಿ ಬಂದಿತ್ತು ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಪಿ-30- ಎಂದು ಗುರುತಿಸಲಾಯಿತು. ಅದೇ ರೀತಿ 2017-18 ರಲ್ಲಿ ಸ.ನಂ: 117/1 ಜಮೀನು ನನ್ನ ಹೆಸರಿನಲ್ಲಿ ಇತ್ತು ಎಂದು ಪಹಣಿ ದಾಖಲೆ ತೋರಿಸಲಾಗಿ ಸಾಕ್ಷಿ ಆ ವರ್ಷದಲ್ಲಿ ನನ್ನ ಹೆಸರಿಗೆ ಇರಲಿಲ್ಲಾ ನಂತರದಲ್ಲಿ ಬಂದಿತ್ತು ಎಂದು ಹೇಳುತ್ತಾರೆ.

**ಓ.ಎಸ್. ನಂ: 19/2015**
**ಪಿ.ಡಬ್ಲ್ಯೂ:1,ಶರಬಣ್ಣಾ**

ಸದರಿ ದಾಖಲೆಯನ್ನು ನಿಪಿ-31 ಎಂದು ಗುರುತಿಸಲಾಯಿತು. ಅದೇ ರೀತಿ 2017-18 ರಲ್ಲಿ ಸ.ನಂ: 111/1 ಜಮೀನು ನನ್ನ ಹೆಸರಿನಲ್ಲಿ ಇತ್ತು ಎಂದು ಪಹಣಿ ದಾಖಲೆ ತೋರಿಸಲಾಗಿ ಸಾಕ್ಷಿ ಆ ವರ್ಷದಲ್ಲಿ ನನ್ನ ಹೆಸರಿಗೆ ಇರಲಿಲ್ಲಾ ನಂತರದಲ್ಲಿ ಬಂದಿತ್ತು ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಪಿ-32 ಎಂದು ಗುರುತಿಸಲಾಯಿತು. ಅದೇ ರೀತಿ 2017-18 ರಲ್ಲಿ ಸ.ನಂ: 123/4, 118, 142/4/3, ಇವುಗಳು ನ್ನನ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿ ಹೌದು ಎಂದು ಹೇಳಿದ್ದು ಆ ಬಗ್ಗೆ ಪಹಣಿ ಪತ್ರಿಕೆಗಳನ್ನು ನಿಪಿ-33 ರಿಂದ 35 ಎಂದು ಗುರುತಿಸಲಾಯಿತು. ಸನ. 80/1 ಇದು 2001-02 ರಲ್ಲಿ ರವಿರಾಜ ಮತ್ತು ಕವಿರಾಜ ಹೆಸೆರಿನಲ್ಲಿ ಇತ್ತು ಎಂದರೆ ಸಾಕ್ಷಿ 2009 ರವರೆಗೆ ಅವರ ಹೆಸರಿನಲ್ಲೇ ಇತ್ತು ಎಂದು ಹೇಳುತ್ತಾರೆ ಆ ಬಗ್ಗೆ ಪಹಣಿ ದಾಖಲೆಯನ್ನು ನಿಪಿ-36 ಎಂದು ಗುರುತಿಸಲಾಯಿತು.

ಗುಲಬರಗಾದ ಜಯನಗರದಲ್ಲಿ 3 ಅಂತ್ರಸ್ತಿನ ಕಟ್ಟಡ ಕೆಳಗೆ 2 ಅಂಗಡಿ ಇರುವ ಸ್ವತ್ತು ನನ್ನ ಹೆಸರಿಗೆ ಇದೆ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ಸಾಕ್ಷಿ ಪುನ: ಹೇಳುವುದೇನಂದರೆ ನನ್ನ ಹೆಸರಿನಲ್ಲಿ ಆಸ್ತಿ ಇದೆ ಆದರೆ 3 ಅಂತ್ತಸ್ತಿ ಇಲ್ಲಾ ಎಂದು ಹೇಳುತ್ತಾರೆ. ಆ ಬಗ್ಗೆ ಕಲಬುರಗಿ ಮಹಾ ನಗರ ಪಾಲಿಕೆ ಸಲ್ಲಿಸಿದ ಫಾರಂನಂ-2 ನಮೂನೆ -1 ಮತ್ತು ರಶೀದಿ ದಾಖಲೆಗಳನ್ನು ತೋರಿಸಿದ್ದು ಅವುಗಳನ್ನು ನಿಪಿ-37 ರಿಂದ 39 ಎಂದು ಗುರುತಿಸಲಾಯಿತು. ನಾನು ಈಗ ಗುಲಬರ್ಗದ ಜಯನಗರದಲ್ಲಿ ವಾಸಿಸುತ್ತನೆ ಓಕಳಿ ಪುರಂ ದ ಮನೆಯಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ಓಕಳಿ ಪುರದ ಬಗ್ಗೆ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಓಕಳಿ ಪುರದಲ್ಲಿ ಆರ್ ಸಿ ಸಿ ಕಟ್ಟದ ಇದ್ದು ಅದರಲ್ಲಿ ನಾನು ನನ್ನ ೨ನೇ ಹಂಡತಿ ಜೊತೆ ವಾಸ ಇದ್ದೆನೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಓಕಳಿ ಪುರ ದಲ್ಲಿ ನನಗೆ ಇನ್ನೊಂದು ಮನೆ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳೂ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಸೇವೆ ಮಾಡಿಲ್ಲಾ, ನೇರವಾಗಿ ವಿಶ್ವ ವಿದ್ಯಾನಿಲಯದಲ್ಲಿ ಕೆಲಸಕ್ಕೆ ಸೇರಿದ್ದೆ ಎಂದು ಹೇಳುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರೆದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ನಾನು 1966 ರಲ್ಲಿ ಶಿಕ್ಷಕನಾಗಿ ಸೇವೆಗೆ ಸೇರಿದ್ದೆ ಎಂದು ಹೇಳಿ ಬರೆಸಿಲ್ಲಾ. ನಾನು 1976 ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡದಲ್ಲಿ ವೃತ್ತಿ ಪ್ರಾರಂಬಿಸಿದ್ದೇ ಎಂದು ಹೇಳಿ ಬರೆಸಿಲ್ಲಾ ಸಾಕ್ಷಿ 1976 ರಲ್ಲಿ ಗುಲಬರ್ಗದಲ್ಲಿ ಕೆಲಸದಲ್ಲಿ ಇದ್ದೆ ಎಂದು ಹೇಳುತ್ತಾರೆ. 1966 ರಿಂದ 1976 ರವರೆಗೆ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಕೆಲಸ ಮಾಡಿರುತ್ತೇನೆ. ನಾನು 2004 ರಲ್ಲಿ ಗುಲಬರ್ಗ ವಿಶ್ವ ವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾಗ ನಿವೃತ್ತಿಯಾಗಿರುತ್ತೇನೆ. ನನ್ನ 38 ವರ್ಷ ಸೇವೆಗೆ ಕರ್ನಾಟಕ ಸಿವಿಲ್ ಸರ್ವಿಸ್ ರೂಲ್ಸ ಮತ್ತು ಸಿ.ಆಂಡ್.ಆರ್ ನಿಯಮಗಳು ಅನ್ವಯವಾಗುತ್ತಿತ್ತು ಎಂದರೆ ಸಾಕ್ಷಿ ವಿಶ್ವ ವಿಧ್ಯಾಲಯ ನೌಕರರಿಗೆ ಆಗುತ್ತಿರಲಿಲ್ಲಾ ಎಂದು ಹೇಳಿ ಮತ್ತೇ ಆ ಬಗ್ಗೆ ನನಗೆ ಗೊತಿಲ್ಲಾ ಎಂದು ಹೇಳುತ್ತಾರೆ. ಈ ಎರಡೂ ಕಾಯಿದೆಗಳು ನನಗೆ

**ಓ.ಎಸ್. ನಂಃ 19/2015**
**ಪಿ.ಡಬ್ಲ್ಯೂಃ1,ಶರಬಣ್ಣಾ**

ಅನ್ವಯ ವಾಗುತ್ತಿದ್ದರೂ ಸಹ ಈಗ ಉದ್ದೇಶ ಪೂರ್ವಕವಾಗಿ ಗೊf ತಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಕಾರ ನಮಗೆ ಯು.ಜಿ. ಸಿ. ಗ್ರ್ಯಾಂಟ್ ರೂಲ್ಸ ಅನ್ವಯ ಆಗುತ್ತಿತ್ತು. ನಾನು ಸೇವೆಗೆ ಸೇರಿದಾಗ ನನ್ನ ಸಂತ ಹೆಸರಿಗೆ ಇರುವ ಆಸ್ತಿ, ಪಿತ್ರಾರ್ಜಿತ ಆಸ್ತಿ ಚರಾಸ್ತಿ ಇವುಗಳ ವಿವರಣೆಯನ್ನು ನೀಡಬೇಕಿತ್ತು ಎಂದರೆ ಸಾಕ್ಷಿ ಅವರು ಕೇಳಿಲ್ಲಾ ನಾವು ಕೊಟ್ಟಿಲ್ಲಾ ಎಂದು ಹೇಳುತ್ತಾರೆ. ನಾನು ಸೇವೆಗೆ ಸೇರಿದಾಗಿನಿಂದ ನಿವೃತ್ತಿ ಆಗುವರೆಗೂ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ನಾನು ಆದಾಯ ತೆರಿಗೆ ರಿರ್ಟನ್ಸ್ ಸಲ್ಲಿಸುವಾಗ ನಾನು ಸ್ವಂತ ಗಳಿಸಿದ ಆಸಿಯನ್ನು ಅದರಲ್ಲಿ ತೋರಿಸಿದ್ದಿರಾ ಎಂದು ಕೇಳಲಾಗಿ ಸಾಕ್ಷಿ ಇಲ್ಲಾ ಅದರಲ್ಲಿ ಕೇವಲ ಆದಾಯ ಅಷ್ಟೇ ತೋರಿಸುತ್ತಾರೆ ಎಂದು ಹೇಳುತ್ತಾರೆ. ನಾನು ಹೇಳಿದಂತೆ ಕಲವೊಂದು ಆಸ್ತಿ ಜಮೀನುಗಳನ್ನು ಸ್ವಂತ ಖರಿದಿ ಮಾಡಿದ ಬಗ್ಗೆ ನನ್ನ ಇಲಾಖೆಯವರ ಅನುಮತಿ ಪಡೆದಿಲ್ಲಾ. ನಾನು ಸ್ವಂತ ಆಧಾಯದಿಂದ ಖರಿದಿ ಮಾಡಿದ ಬಗ್ಗೆ ಖರಿದಿ ಪತ್ರ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ ಗುಲಬರ್ಗಾದಲ್ಲಿ ಪ್ಲಾಟ್ ಖರಿದಿ ಮಾಡಿದ ಬಗ್ಗೆ ಖರಿದಿ ಪತ್ರ ಹಾಕಿರು್ತೇನೆ ಅದರಲ್ಲಿ ಈಗ ಮನೆ ಇದೆ ಎಂದು ಹೇಳುತ್ತಾರೆ.

ಮಂದುವೆರೆದ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೊರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.